# ಎಂತು ನೋಡಿದರು ಚಿಂತೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** Lyrics mentioned without highlights are as per Ref. 1. The wordings as per Ref. 2 are similar to Ref. 1 except few differences which are given in yellow highlights.
4. **Note:** Singer has followed these lyrics with few differences.

ರಾಗ ಕಾಂಭೋದಿ ಝಂಪೆ ತಾಳ

ಎಂತು ನೋಡಿದರು ಚಿಂತೆ ಈ ಒಡಲು
ನಿಶ್ಚಿಂತರಾಗಿಹರ (ಒಬ್ಬರನು) (ನಾನೆಲ್ಲೂ) ಕಾಣೆ || ಪ ||

ಬ್ರಹ್ಮನಿಗೆ ಶಿರ ಹೋಗಿ ಬಾಡಿ ಬಳಲುವ ಚಿಂತೆ
ಮುನ್ನ ಮಾರುತಿಗೆ ಕಪಿಯಾದ ಚಿಂತೆ
ಮನ್ಮಥಗೆ ತನು ಸುಟ್ಟು ಬೂದಿಯಾಗಿಹ ಚಿಂತೆ
ಕಣ್ಣು ಮೂರುಳ್ಳವಗೆ ತಿರಿದುಂಬ ಚಿಂತೆ || 1 ||

ಕಾಮಧೇನುವಿಗೆ ಕರೆದೊಯ್ವರೆಂಬ ಚಿಂತೆ
ಕಾಮಿನಿಯರಿಗೆ ಒಡವೆ ವಸ್ತ್ರದ ಚಿಂತೆ
ಸೀಮೆಯಾಳುವ ದೊರೆಗೆ ಪರ ದೊರೆಗಳ ಚಿಂತೆ
ಪಾಮರನಿಗೆ ಬರಹ ಬಾರದಿಹ ಚಿಂತೆ || 2 ||
(ಪಾಮರ ನರಗೆ ಬರೆಹ ಬರದಿರುವ ಚಿಂತೆ)

ಧರ್ಮಾತ್ಮರೆಲ್ಲರಿಗೆ ದೀನ ಜನರಾ ಚಿಂತೆ
ಕರ್ಮಾತ್ಮರೆಲ್ಲರಿಗೆ ಕೆಡುವ ಚಿಂತೆ
ವರ್ಮ ಬೆಳೆಸುವರಿಗೆ ವೈರಿ ಕೊಲ್ಲುವ ಚಿಂತೆ

ಬರ್ಮಣಗೆ ಸತತ ಮೃಷ್ಟಾನ್ನದ ಚಿಂತೆ    || 3 ||

ಭಕ್ತರಿಗೆ ಗುರುವಿನೊಳು ಮುಕ್ತಿ ಬೇಡುವ ಚಿಂತೆ
ಮುಕ್ತರಿಗೆ ಪರಮಾತ್ಮ ದೊರೆವ ಚಿಂತೆ
ಯುಕ್ತಿ ಬಲ್ಲವಗೆ ವಿವೇಕವಾಡುವ ಚಿಂತೆ
ವಿರಕ್ತನಾದವಗೆ ಕಾಮ ಸುಡುವ ಚಿಂತೆ    || 4 ||

ಕ್ಷುದ್ರ ರಕ್ಕಸರಿಗೆಲ್ಲರನು (ಕೊಲ್ಲುವ) (ತಿನ್ನುವ) ಚಿಂತೆ
ನಿದ್ರೆ ಬಾರದವಗೆ ರಾತ್ರಿ ಚಿಂತೆ
ಕದ್ದು ತರಲ್ಪೋದವಗೆ ಕೋಳಿ ಕೂಗುವ ಚಿಂತೆ
ಮುದ್ದು ಪುರಂದರ ವಿಠಲನ ನೆನೆಯೆ ನಿಶ್ಚಿಂತೆ    || 5 ||
(ಮುದ್ದು ಪುರಂದರ ವಿಠಲನೊಬ್ಬನಿಗೆ ನಿಶ್ಚಿಂತೆ)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಪುರಾಣಸಂದರ್ಭಗಳನ್ನೂ ನಿತ್ಯ ಜೀವನದ ಸಂದರ್ಭಗಳನ್ನೂ ಗಮನಿಸಿ ಲೌಕಿಕರಾದ ಮನುಷ್ಯರಿಗೆ ಚಿಂತೆ ತಪ್ಪದು ಎಂದು ಹೇಳುವ ಹಾಡು.

**ಬ್ರಹ್ಮನಿಗೆ...** – ಬ್ರಹ್ಮನಿಗೆ ಮೊದಲು ಐದು ಮೊಗಗಳಿದ್ದುವೆಂದೂ, ಶಿವನು ಅಸೂಯೆಯಿಂದ ಅವನದೊಂದು ಮೊಗವನ್ನು ಚಿವುಟಿ ಕಿತ್ತನೆಂದೂ, ಆ ಬ್ರಹ್ಮಹತ್ಯಾದೋಷಕ್ಕೆ ಫಲವಾಗಿ ಬ್ರಹ್ಮನ ಕಪಾಲವು ಶಿವನ ಕೈಗೆ ಅಂಟಿಕೊಂಡುಬಿಟ್ಟಿತೆಂದೂ, ಅದರ ಬಾಧೆಯನ್ನು ತೀರಿಸಿಕೊಳ್ಳಲು ಶಿವನು ಅಂಡಲೆದು ಕಡೆಗೆ ಕಾಶಿಯಲ್ಲಿ ಈಗ ಕಪಾಲಮೋಚನ ಎಂದು ಪ್ರಸಿದ್ಧವಾಗಿರುವ ಸ್ಥಳದಲ್ಲಿ ಸ್ನಾನ ಮಾಡಲು ಕಪಾಲವು ಅವನ ಕೈಬಿಟ್ಟಿತೆಂದೂ ಪುರಾಣದ ಕಥೆ.

**ಮುನ್ನ ಮಾರುತಿಗೆ...** – ಅಂಜನಾದೇವಿಯ ಮಗನಾಗಿ ಸುಂದರನಾಗಿದ್ದ ಮಾರುತಿಯು ಸೂರ್ಯನನ್ನು ತಿನ್ನಲು ಹೋಗಿ ಪೆಟ್ಟು ತಿಂದು ಮುಖವು ಕೆಂಪು ಬಣ್ಣಕ್ಕೆ ತಿರುಗಿ ದವಡೆಗಳು ಉಬ್ಬಿ ಕಪಿಮುಖವಾಯಿತೆಂದು ಪುರಾಣದ ನಿರೂಪಣೆ.

**ಮನ್ಮಥಗೆ...** – ಶಿವನ ತಪಸ್ಸನ್ನು ಕೆಡಿಸಲು ಇಂದ್ರನಿಂದ ಪ್ರೇರಿತನಾಗಿ ಹೋದ ಮನ್ಮಥನು ಸಿಟ್ಟಿಗೆದ್ದ ಶಿವನ ಹಣೆಗಣ್ಣಿಂದ ಸುಟ್ಟು ಬೂದಿಯಾದ ಕಥೆ ಸುಪ್ರಸಿದ್ಧವಾದುದು; ಕಾಳಿದಾಸನ ‘ಕುಮಾರ ಸಂಭವ’ ಕಾವ್ಯದಲ್ಲಿ ಇದರ ವರ್ಣನೆಯಿದೆ.

**ಕಣ್ಣು ಮೂರುಳ್ಳವಗೆ…** – ಶಿವನಿಗೆ ದಿಗಂಬರನಾಗಿ, ನಿಷ್ಕಿಂಚನನಾಗಿ ಭಿಕ್ಷಾಟನೆ ಮಾಡುವ ಸ್ಥಿತಿ ಒದಗಿದುದೂ ಪುರಾಣದ ಕಥೆಯೇ. ದಕ್ಷಿಣ ದೇಶದಲ್ಲಿ 'ಭಿಕ್ಷಾಂಡರ್ ಕೋವಿಲ್' ಎಂಬ ಕ್ಷೇತ್ರದ ಸ್ಥಳ ಪುರಾಣದಲ್ಲೂ ಇದು ಬಂದಿದೆ. ಶಿವನ ಲೀಲಾಮೂರ್ತಿಗಳಲ್ಲಿ 'ಭಿಕ್ಷಾಟನ ಮೂರ್ತಿ' ಎಂಬುದೂ ಒಂದು.

**ಕಾಮಧೇನುವಿಗೆ…** – ಕಾಶ್ಯಪ – ಸುರಭಿಯರ ಮಗಳಾದ, ದೇವಲೋಕದ ಹಸುವಾದ ಕಾಮಧೇನುವನ್ನು ದೈತ್ಯ ದಾನವರು ದೇವಲೋಕವನ್ನು ದಾಳಿ ಮಾಡಿ ಅಡಿಗಡಿಗೆ ಕೊಡೊಯ್ದಿದ್ದರೆಂದು ಕಾಳಿಕಾ ಪುರಾಣದಲ್ಲಿ ಉಲ್ಲೇಖವಿದೆ.

**ಪಾಮರ…** – ಮೂರ್ಖ.

**ಧರ್ಮಾತ್ಮರೆಲ್ಲರಿಗೆ…** – ದಾನ ಮಾಡುವ ಜನರಿಗೆ ಬಡವರದ್ದೇ ಗೀಳು.

**ಕರ್ಮಾತ್ಮರೆಲ್ಲರಿಗೆ…** – ಕರ್ಮವು ಬಲವಾದರೆ ದಾರಿಗಾಣದೆ ಕೆಟ್ಟ ಕೆಲಸಕ್ಕೆ ತೊಡಗುವ ಪ್ರವೃತ್ತಿ ಬರುತ್ತದೆ.

**ಮರ್ಮ ಬೆಳೆಸುವರಿಗೆ…** – ಕುತಂತ್ರವನ್ನೇ ಹಿಡಿದಿರುವ ರಾಜಕಾರಣಿಗಳಿಗೆ.

**ಬರ್ಮಣರಿಗೆ…** – ಬ್ರಾಹ್ಮಣರಿಗೆ.

**ಕದ್ದು ತರಲ್ಹೋದವಗೆ…** – ಕಳ್ಳನಿಗೆ ಬೆಳಗಾದೀತೆಂಬ ಅಂಜಿಕೆ.

**Classification:** Keerthane
**Ankita:** purandara vittala
**Location:** NA
**Category:** Jeevana Darshana
**Sub-Category:** chinte, brahma, hanuma, manmatha, shiva, kamadhenu, arasa, nara, dharma, karma, brahmana, mukti, paramatma, kama, asura, nidde, koli, kalla, kannu,
**Pravachana:** NA
**Explanation:** NA